# ಬಕುತಿ ಎಂಬುದು ತೋರುಂಬ ಲಾಭ!

ಭಕ್ತಿಯೆಂಬುದನ್ನು ಬಹಿರಂಗವಾಗಿ ಮಾಡಲಾಗದೆಂದು ಬಸವಣ್ಣನವರು ಅಭಿಪ್ರಾಯಪಡುತ್ತಾರೆ. ಅದು ತೋರಿಕೆಯ ಪ್ರದರ್ಶನದ ವಿಷಯವಲ್ಲ. ಸಂಗಾತಿಯ ರತಿ ಸುಖದಂತೆ ಏಕಾಂತದಲ್ಲಿ ಅನುಭವಿಸಿ ಪಡೆವ ಆತ್ಮಾನಂದ! ಸತಿ ಪತಿಗಳಿಗೆ ಮಾತ್ರ ಸೇರಿದ ಅತ್ಯಂತ ಸ್ವಂತದ ಸಂಗತಿ. ಭಕ್ತಿಯೂ ಹಾಗೆಯೇ. ತೀರ ವೈಯಕ್ತಿಕ ನೆಲೆಯಲ್ಲಿ ಅನುಭವಿಸಬೇಕಾದ ಭಕ್ತ ಭಗವಂತರ ಆತ್ಮ ಸಂಗಾತದ ಅನುಭವ ಸಾಂಗತ್ಯ! ಆದುದರಿಂದಲೇ ಅದು ಗುಪ್ತವಾಗಿ ಆಚರಿಸಬೇಕಾದ ಅಂತರಂಗದ ಕ್ರಿಯೆ. ಅದು ದೈಹಿಕ ಶುದ್ಧಿ ಅಥವಾ ಮಂತ್ರ ಪಠಣಗಳನ್ನು ನಿರೀಕ್ಷೆ ಮಾಡದು. ನಿಜವಾದ ಭಕ್ತನೊಬ್ಬನಿಗೆ ಆ ಬಗೆಗಿನ ಚಿಹ್ನೆಗಳೇ ಇರುವುದಿಲ್ಲ. ಅವನೊಬ್ಬ ಸಾಮಾನ್ಯನಂತೆ ಅಲ್ಪನಂತೆ ಅನಾಮಿಕನಾಗಿರುತ್ತಾನೆ. ಧಾರ್ಮಿಕ-ಸಿದ್ಧಾಂತ ರೂಪಗಳ ದಿರುಸು- ನಾಮ ಮುದ್ರೆ- ಸಂಕೇತಗಳನ್ನು ಮೆರೆಸುವುದು ಭಕ್ತನು ಭಗವಂತನಿಗೆ ಮಾಡುವ ಅವಮಾನವೆಂದು ಭಾವಿಸುತ್ತಾನೆ. ಅದನ್ನೇ ನಿಜವಾದ ಚಿಂತಕರು ಡಾಂಬಿಕತೆಯೆಂದು ಕರೆದಿರುವುದು. ಇಂಥ ಕಪಟ ಕರ್ಮಠರನ್ನು ನಮ್ಮ ವಚನಕಾರರು- ದಾಸರು ನೇರವಾಗಿ ವಿಡಂಬಿಸಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ.

ಬದುಕಿನ- ಬದುಕಿನಾಚೆಯ ಅಂತಿಮ ಸತ್ಯವನ್ನು ತಿಳಿಯುವುದೇ ಅಧ್ಯಾತ್ಮದ ಮುಖ್ಯ ಶೋಧವೆಂದು ತಿಳಿಯುವುದಾದರೆ, ಅದಕ್ಕೆ ಮಂತ್ರ ಮೂರ್ತಿಪೂಜೆ, ಜಾಗಟೆ ಗಂಟೆ ಮುಂತಾದ ಅಬ್ಬರಗಳ ಅವಶ್ಯಕತೆಯಿರುವುದಿಲ್ಲ. ಅದೊಂದು ಬಗೆಯ ಗುಪ್ತ-ಮೌನ ನೆಲೆಯಲ್ಲಿ ಸಾಗುವ ಸಾಧನೆ. ಯಾವುದೇ ಬಗೆಯ ಲೌಕಿಕ ಬಯಕೆಯಿಂದ ಮೂಡಿರುವಂಥದ್ದಲ್ಲ. ಅದು ಕೇವಲ ಆತ್ಮಶುದ್ಧಿ, ಆತ್ಮಸಿದ್ಧಿ ಮತ್ತು ಜ್ಞಾನ ತೃಪ್ತಿಗಾಗಿ ಪರಿತಪಿಸುವ ಪ್ರಯತ್ನವಷ್ಟೇ ಆಗಿರುತ್ತದೆ, ಆಗಿರಬೇಕು. ಅದು ಬಿಟ್ಟು ಆ ಪ್ರಯತ್ನದಲ್ಲಿ ಲೌಕಿಕ ಬಯಕೆಯ ಛಾಯೆ ಇಣುಕಿದ ಕೂಡಲೇ ಅದು ಸ್ವಾರ್ಥವಾಗಿಬಿಡುತ್ತದೆ.

ಪೂಜೆ, ಗುಡಿಗೋಪುರ ನಿರ್ಮಾಣ, ಹಬ್ಬಹರಿದಿನ, ಉತ್ಸವ- ಮೆರವಣಿಗೆ ಮುಂತಾದ ಆಚರಣೆ ಮತ್ತು ಮೂರ್ತ ಸ್ವರೂಪದ ಲಕ್ಷಣಗಳನ್ನು ಭಕ್ತಿಯ ಸೂಚಕಗಳೆಂದು ಕರೆಯಲಾಗಿದೆ. ಈ ತೆರನ ಸೂಚಕಗಳಲ್ಲಿ ಬೌದ್ಧಿಕತೆಯ ಚಿಂತನೆ-ತತ್ವದರ್ಶನಗಳಿಗಿಂತ ಭಾವುಕತೆಯ ಅಂಶವೇ ಪ್ರಧಾನವಾಗಿ ಕೆಲಸ ಮಾಡುತ್ತದೆ. ಹಾಗೆ ನೋಡಿದರೆ ಭಕ್ತಿಯೆಂಬುದು ಭಾವಪ್ರಧಾನವಾದುದೇ ಹೊರತು ಬೌದ್ಧಿಕ ನೆಲೆಯಲ್ಲಿ ನಿಂತಿರುವಂಥದ್ದಲ್ಲ. ಆದ್ದರಿಂದ ಭಕ್ತಿಯಲ್ಲಿ ವಿಚಾರ ಪರತೆಗಿಂತ ಮಿಗಿಲಾಗಿ ಆವೇಶ ಅತಿರೇಕಗಳು ಸದಾ ಸಂಚಾರಿಗಳಾಗಿರುತ್ತವೆ. ಅಲ್ಲಿ ನಂಬಿಕೆಯೇ ಆಳ್ವಿಕೆ ನಡೆಸುತ್ತದೆ. ನಂಬಿಕೆಗೆ ಕಾರಣ ಮತ್ತು ವಿಚಾರಗಳ ಬುನಾದಿ ಬೇಕಿರುವುದಿಲ್ಲ. ಈ ಭಾವನಾತ್ಮಕ ನಂಬಿಕೆಯೇ ಒಮ್ಮೊಮ್ಮೆ ಅರೆ ಹುಚ್ಚುಸ್ಥಿತಿಗೆ ಕೊಂಡೊಯ್ಯಬಹುದು; ಉನ್ಮಾದತೆಗೆ ತಲುಪಬಹುದು. ಹೊರಗೆ ನಿಂತು ನೋಡುವವರಿಗೆ ಅತಿಮಾನುಷ ಶಕ್ತಿ ಮೈವೆತ್ತಿರುವಂತೆ ಭಾಸವಾಗಬಹುದು. ದೇವರೋ ದೆವ್ವವೋ ಅವಗಾಹನೆಯಾದಂತೆ ತೋರಬಹುದು. ಮುಂದೆ ಇಂಥ ನಡವಳಿಕೆಗಳು ಭಯ ಮೂಡುವುದಕ್ಕೂ ಕಾರಣವಾಗಬಹುದು. ಈ ಭಯ ಮೂಡಿಸುವ ಸ್ಥಿತಿ ಮುಂದೆ ಕಾಲ ಕಳೆದಂತೆಲ್ಲಾ ಕುವ್ಯಕ್ತಿಗಳ ಕೈಯಲ್ಲಿ ದಾಳವಾಗಿ ಪ್ರಯೋಗವಾಗಿ ಶೋಷಣೆಯ ಅಸ್ತ್ರವಾಗಬಹುದು. ಚರಿತ್ರೆಯಲ್ಲಿ ಭಕ್ತಿಯ ವೃತ್ತದ ಸುತ್ತ ನಡೆದಿರುವ ಬೆಳವಣಿಗೆ ಇದೇ ಆಗಿರುವ ಸಾಧ್ಯತೆಯಿದೆ. ಆತ್ಮಗಳ ಸಾಂಗತ್ಯದ ಮಧುರ ಅನುಬಂಧವಾಗುವುದರ ಬದಲು ಮೌಢ್ಯದ ಸರಕಾಗಿ ನಿಂತದ್ದು ಮಾತ್ರ ವಿಷಾದಕ್ಕೆ ಕಾರಣವಾಗಿದೆ.

ಇಂದು ಭಕ್ತಿ ಎಂಬುದು, ಪೂಜೆ ಎಂಬುದು ತೋರಿಕೆಯ ಸರಕಾಗಿರುವುದು ನೋವಿನ ಸಂಗತಿಯಾಗಿದೆ. ಅದು ಸಾಂಸ್ಥಿಕ ಸ್ವರೂಪವನ್ನು ತ್ವರಿತಗತಿಯಲ್ಲಿ ಪಡೆಯುತ್ತಿರುವುದಂತೂ ಹೆದರಿಕೆಯನ್ನುಂಟು ಮಾಡುತ್ತಿದೆ. ಅದು ಆಧುನಿಕ ಅರ್ಥ ಸಂಸ್ಕೃತಿಯ ಮನಸ್ಥಿತಿಗನುಗುಣವಾಗಿ ವ್ಯಾಪಾರೀಕರಣದ ಸಾಧನವಾಗಿ ಬಳಕೆಯಾಗುತ್ತಿದೆ. ರಸ್ತೆ ರಸ್ತೆಗಳಲ್ಲಿ ದೇವರು- ದೇವಸ್ಥಾನಗಳು ಹರಿದಾಡುತ್ತಿವೆ ಅಥವಾ ಸ್ಥಾವರ ಸ್ವರೂಪ ಪಡೆಯುತ್ತಿವೆ. ಆಧುನಿಕ ಸ್ವಾಮೀಜಿಗಳು ಸೃಷ್ಟಿಗೊಂಡು ದೇಶ ವಿದೇಶಗಳಲ್ಲಿ ತಮ್ಮ ಸಾಂಸ್ಥಿಕ ಸ್ವರೂಪಗಳ ಶಾಖೆ ಉಪ ಶಾಖೆಗಳನ್ನು ತೆರೆದು ಶ್ರೀಮಂತರೆನ್ನಸಿಕೊಳ್ಳುತ್ತಿದ್ದಾರೆ. ಈ ದಿಸೆಯಲ್ಲಿ ಸ್ವಾಮೀಜಿಗಳಲ್ಲಿ ಸ್ಪರ್ಧೆ ಏರ್ಪಟ್ಟಿದೆ. ಭಕ್ತಿಯು ಅಂತರಂಗದ ಮಿಡಿತವಾಗದೆ-ಭಗವಂತನನ್ನು ಕರೆವ ಕೂಗಾಗದೆ ಆರ್ಭಟದ ಅಬ್ಬರದ ಗಲಾಟೆಯಾಗುತ್ತಿದೆ. ದೇವರು-ಭಕ್ತಿ- ಮೌನ-ಶ್ರದ್ಧೆ-ನಂಬಿಕೆಗಳು ಧಾರ್ಮಿಕ ಕ್ಷೇತ್ರಗಳನ್ನು ತೊರೆದು ಎಂದೋ ಮರೆಯಾಗಿವೆ. ದೇವರನ್ನು ಪೂಜಿಸುವುದು, ಆರಾಧಿಸುವುದು ಸ್ವಾರ್ಥ ಪೂರೈಕೆಯ ಅಂಶವಾಗಿದೆ. ಶ್ರದ್ಧೆ ಮತ್ತು ನಂಬಿಕೆಗಳು ಆತ್ಮವನ್ನು ತೊರೆದು ಹೋಗಿರುವುದರಿಂದ- ಆತ್ಮ ಭೋಗಲಾಲಸೆಯ ಗೂಡಾಗಿ ಮಾರ್ಪಟ್ಟಿದೆ. ಆದ್ದರಿಂದ ಅದು ಪರಮಾತ್ಮನನ್ನು (ಇದ್ದಲ್ಲಿ) ಗುರುತಿಸುವದಲ್ಲಿ ವಿಫಲವಾಗುತ್ತಿದೆ ಅಂದ ಮೇಲೆ ಸತ್ಯಶೋಧವನ್ನು ಮಾಡುವುದೆಂತು?

ಆಧುನಿಕ ಆಸ್ತಿಕ ಮನಸ್ಸುಗಳು ಇಂದು ಮತಧರ್ಮ ದೇವರುಗಳನ್ನು ಅವರವರ ನಂಬಿಕೆಯನ್ನು ಬಳಸಿಕೊಂಡು ಜಾಗತಿಕ ಐಕ್ಯತೆಯನ್ನು ಒಡೆಯುವ ಕೆಲಸವನ್ನು ಮಾಡುತ್ತಿವೆ. ಪರಸ್ಪರ ಪ್ರೀತಿಯಿಂದ ಮಾನವತೆಯನ್ನು ಬೆಳೆಸುವ ಕೆಲಸವಾಗಬೇಕಾಗಿದ್ದ ಜಾಗದಲ್ಲಿ ಇಂದು ದ್ವೇಷ ಅಸೂಯೆ ಅಹಂಕಾರ ಮೇಲರಿಮೆಗಳನ್ನು ಮೂಡಿಸಲಾಗುತ್ತಿದೆ. ಈ ಅಂಶ ಮಾನವನು ಬೆಳೆದಿರುವುದನ್ನು ಸೂಚಿಸುತ್ತಿದೆಯೇ? ಈ ಸತ್ಯವನ್ನು ಅರಿತೇ ಅಲ್ಲಮ ಪ್ರಭು 'ಬಕುತಿ ಎಂಬುದು ತೋರುಂಬ ಲಾಭ' ಎಂದು ಹೇಳಿದ್ದಾನೆಯೇ?

■ ಶಿಕಾಕು

## ಮಾತೇ ಮುತ್ತು

★ ಮದುವೆ ಆಗಲು ದೂರ ಹೋಗುವವನು ಮೋಸ ಮಾಡುತ್ತಾನೆ; ಇಲ್ಲವಾದರೆ ಮೋಸಕ್ಕೆ ಗುರಿಯಾಗುತ್ತಾನೆ.

-ಸ್ಪ್ಯಾನಿಷ್ ಗಾದೆ

★ ಬಸವನ ಹಿಂದೆ ಬಾಲ, ಮದುವೆ ಹಿಂದೆ ಸಾಲ.

-ಕನ್ನಡ ಗಾದೆ

★ ಇಪ್ಪತ್ತರಲ್ಲಿ ವಧು ವರ ನೋಡಲು ಲಕ್ಷಣವಾಗಿರುವನೇ ಎಂದು ಕೇಳುತ್ತಾಳೆ; ಮೂವತ್ತರಲ್ಲಿ ವರ ಶ್ರೀಮಂತನೇ ಎನ್ನುತ್ತಾಳೆ; ಮುವತ್ತೈದರಲ್ಲಿ ಅವನೆಲ್ಲಿ? ಎನ್ನುತ್ತಾಳೆ!

-ಯಹೂದಿ ಗಾದೆ

★ 'ಪ್ರೇಮ' ಎಷ್ಟೇ ಪ್ರಖರವಾಗಿರಲಿ, 'ಮದುವೆ' ಅದನ್ನು ಹತೋಟಿಗೆ ತರುತ್ತದೆ.

-ರಷ್ಯನ್ ಗಾದೆ

★ ಮದುವೆ ಮಾಡಿಕೊಳ್ಳುವಾಗ, ಔಷಧಿ ತೆಗೆದುಕೊಳ್ಳುವಾಗ ತುಂಬಾ ಯೋಚಿಸಬಾರದು.

-ಡಚ್ ಗಾದೆ

★ ನಿಜವಾದ ಕಲೆ ಸತ್ಯದಿಂದ ದೂರ ಇರಲಾರದು.

-ಆರ್.ಎಂ.ಹಡಪದ

★ ಮನಸ್ಸು ರೋಗವನ್ನು ಸೃಷ್ಟಿಸಬಹುದು. ಗುಣಪಪಡಿಸಲೂ ಬಲ್ಲದು!

-ಸ್ವಾಮಿ ಜಗದಾತ್ಮಾನಂದ

★ 'ಏಕಾದರೂ ಹಾಗೆ ಮಾತನಾಡಿದೆನೋ' ಎಂದು ಸಂಕಟ ಪಟ್ಟಿದ್ದಿದೆಯೇ ಹೊರತು, 'ಸುಮ್ಮನಿದ್ದದ್ದಕ್ಕಾಗಿ' ಎಂದೂ ಸಂಕಟ ಪಟ್ಟದ್ದಿಲ್ಲ.

-ಪಬ್ಲಿಯಸ್ ಸೈರಸ್

★ ಅನಾಥರ ಸೊತ್ತನ್ನು ಕಬಳಿಸುವವನು ಹೊಟ್ಟೆಯಲ್ಲಿ ಬೆಂಕಿ ಕೆಂಡಗಳನ್ನು ಇಟ್ಟುಕೊಂಡಂತೆ.

-ಕುರಾನ್

★ ಕ್ರಿಯೆಯಲ್ಲಿ ನಿರತನಾದ ಬಳಿಕ ಗುರುವಿನ ಗದ್ದುಗೆ ಬೇಕಿಲ್ಲ, ಪೂಜೆ ಬೇಕಿಲ್ಲ.

-ಸೊನ್ನಲಗಿ ಸಿದ್ಧರಾಮ

★ ಶರೀರವೇ ನಮ್ಮ ತೋಟ; ಮನಸ್ಸೇ ತೋಟಗಾರ.

-ಶೇಕ್ಸ್‌ಪಿಯರ್

★ ಆಡಿದ ತಕ್ಷಣ 'ಮಾತು' ಸಾಯುತ್ತದೆ ಎನ್ನುವವರಿದ್ದಾರೆ. ನನಗೆ ಅನ್ನಿಸುತ್ತದೆ- ಆಡಿದ ತಕ್ಷಣ ಮಾತಿಗೆ 'ಜೀವ' ಬರುತ್ತದೆ- ಎಂದು.

-ಎಮಿಲಿ ಡಿಕಿನ್‌ಸನ್